**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

**ಅಸಲು ದಾವಾ ಸಂಖ್ಯೆ :802/2021**

**ಪಿ. ಡಬ್ಲೂ : 1**

---

**ಸತ್ಯ ಪ್ರತಿಜ್ಞೆಯ ಮೇರೆಗೆ, ದಿನಾಂಕಃ 13.01.2026**

****

**ಪಾಟೀ ಸವಾಲುಃ 1 ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ . MDG ವಕೀಲರಿಂದಃ**

1. ನನಗೆ 48 ವರ್ಷ ವಯಸ್ಸು ಆಗಿರಬಹುದು. 1ನೇ ಪ್ರತಿವಾದಿಗೆ ಸುಮಾರು 66 ವರ್ಷ ವಯಸ್ಸಾಗಿರಬಹುದು ಎಂದರೆ ಸರಿ . ನನ್ನ ಹಾಗೂ 1ನೇ ಪ್ರತಿವಾದಿಯ ಮದುವೆ ಆಗಿ ಸುಮಾರು 33 ವರ್ಷಗಳು ಆಗಿರಬಹುದು ಎಂದರೆ ಸರಿ . 1ನೇ ಪ್ರತಿವಾದಿ ಹಾಗೂ ನನ್ನ ಮದುವೆಯು ಅವರ ತೋಟದಲ್ಲಿ ಹಾಗೂ ಆ ಸಮಯದಲ್ಲಿ 1 ನೇ ಪ್ರತಿವಾದಿಯ ಅಣ್ಣನ ಮದುವೆಯು ಸಹ ಆಗಿತ್ತು ಎದರೆ ಸರಿ . ಮದುವೆಯಾದಾಗ ನನ್ನ ವಯಸ್ಸು 6 ವರ್ಷ ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನಗೆ 18 ವರ್ಷ ವಯಸ್ಸು ಆಗಿತ್ತು ಎಂದು ನುಡಿಯುತ್ತಾರೆ. ನನ್ನ ಮದುವೆಯಾದಾಗ ನನಗೆ 6 ವರ್ಷ ಆಗಿದ್ದರೂ ಸಹ 18 ವರ್ಷ ಆಗಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂರದೆ ಸರಿಯಲ್ಲ. ನನ್ನ ಮದುವೆಯಾದಾಗ ನನ್ನ ಅತ್ತೆ ಮರಣ ಹೊಂದಿದ್ದರು ಎಂದರೆ ಸರಿ . ನಾನು 1ನೇ ಪ್ರತಿವಾದಿಯ ಜೊತೆ ಮದುವೆಯಾದಾಗಿನಿಂದ ಯಾವತ್ತು ಸಹ ಸಂಸಾರ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 4-5 ವರ್ಷಗಳ ಕಾಲ ಸಂಸಾರ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ಮದುವೆಯಾದಾಗ 6 ವರ್ಷ ವಯಸ್ಸಾಗಿದ್ದರಿಂದ ನಾನು ದೊಡ್ಡವಳು ಆಗುವವರೆಗೆ ನನ್ನ ತವರು ಮನೆ ಸತ್ತಿ ಗ್ರಾಮದಲ್ಲಿ ಇದ್ದೆ ಎಂದರೆ ಸರಿಯಲ್ಲ. ನಾನು 1ನೇ ಪ್ರತಿವಾದಿಯ ಜೊತೆ ದೊಡ್ಡವಳಾದ ನಂತರ 3-4 ದಿನ ಸಂಸಾರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು 1ನೇ ಪ್ರತಿವಾದಿಯ ಮನೆಗೆ ಬಂದಾಗ ಅವನು ವಯಸ್ಸಾದ ವ್ಯಕ್ತಿ ಇರುತ್ತಾನೆ ಹಾಗೂ ಮುದುಕನಾಗಿರುತ್ತಾನೆ ಆದ್ದರಿಂದ ನಾನು ಅವನ ಜೊತೆ ಬಾಳ್ವೆ ಮಾಡುವುದಿಲ್ಲ ಎಂದು ಸ್ವತಃ ನಾನೇ ಗಂಡನ ಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು ನನಗೆ ಕುಡಿದು ಹೊಡೆಬಡೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತವರು ಮನೆಯಲ್ಲಿ ಇದ್ದಾಗ ಬೇರೆಯವರ ಜೊತೆ ಸಂಬಂಧ ಬೆಳೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 1ನೇ

ಪ್ರತಿವಾದಿಯು ಈಗ ಸುಮಾರು 25-30 ವರ್ಷಗಳಿಂದ ಮಹಾರಾಷ್ಟ್ರ ರಾಜ್ಯದ ವಾಳ್ವ ತಾಲೂಕನಲ್ಲಿ ಇರುತ್ತಾನೆ ಎಂದರೆ ಸರಿ . 1ನೇ ಪ್ರತಿವಾದಿಯು ಇಲ್ಲಿ ಕೂಲಿ ಸಾಕಾಗದ ಕಾರಣ ಕೂಲಿ ಮಾಡಲು ಸದರಿ ವಾಳ್ವ ಪಟ್ಟಣಕ್ಕೆ ಸುಮಾರು25-30 ವರ್ಷಗಳ ಹಿಂದೆ ಹೋಗಿರುತ್ತಾನೆ ಎಂದರೆ ಸರಿ . ನಾನು ವಾಳ್ವ ಪಟ್ಟಣಕ್ಕೆ 1ನೇ ಪ್ರತಿವಾದಿಯ ಜೊತೆ ಸಂಸಾರ ಮಾಡಲು ಹೋಗಿಲ್ಲ ಎಂದರೆ ಸರಿಯಲ್ಲ.

2. ನಾನು ಹಾಜರುಪಡಿಸಿರುವ ನಿಪಿ 1 ಜಮೀನು ಮಡ್ಡಿ ಜಮೀನು ಆಗಿರುತ್ತದೆ ಎರದೆ ಸರಿ . ಸದರಿ ಜಮೀನಿನಲ್ಲಿ ಜೋಳದ ಬೆಳೆ ಮಾತ್ರ ಬೆಳೆಯುತ್ತಾರೆ ಎಂದರೆ ಸರಿಯಲ್ಲ. ನಿಪಿ 1 ಮೂರು ಹೆಸರಿನಲ್ಲಿ ಇರುವ ದಾಖಲಾತಿ ಆಗಿರುತ್ತದೆ ಎಂದರೆ ಸರಿ . ನಿಪಿ 1 ರಲ್ಲಿ ಇರುವ ಕೆರಬಾ ಹಾಗೂ ಹಣಮಂತ 1ನೇ ಪ್ರತಿವಾದಿಯ ಸಹೋದರ ಎಂದರೆ ಸರಿ . ಶ್ರೀಪತಿ ಬಾವುಸಾಬ ಈತನು 1ನೇ ಪ್ರತಿವಾದಿಯ ಕಾಕಾ ಎಂದರೆ ಸರಿ . 2 ಮತ್ತು 3ನೇ ಪ್ರತಿವಾದಿಯರ ಸಮಪಾಲು ಸದರಿ ಸ್ವತ್ತಿನಲ್ಲಿ ಇರುತ್ತದೆ ಎಂದರೆ ಸರಿ . ಸದರಿ ದ್ರಾಕ್ಷಿ ಹಾಗೂ ಕಬ್ಬು ಬೆಳೆಯನ್ನು ಬೆಳೆಯುವುದಿಲ್ಲ ಎಂದರೆ ಸರಿಯಲ್ಲ. ನಾನು 1ನೇ ಪ್ರತಿವಾದಿಗೆ ಸೋದರತ್ತೆಯ ಮಗಳು ಆಗಬೇಕು ಎಂದರೆ ಸರಿ .

3. 1ನೇ ಪ್ರತಿವಾದಿಯು ಹೊಟ್ಟೆ ನೋವಿನಿಂದ ಹಾಗೂ ಮೂತ್ರ ಪಿಂಡದಲ್ಲಿ ಹರಳು ಆಗಿರುತ್ತದೆ ಹಾಗೂ ಬಳಲುತ್ತಿದ್ದಾನೆ ಆದ್ದರಿಂದ ಅವನಿಗೆ ದುಡಿಯಲು ಶಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಗ್ಯವಾಗಿ ಇರುತ್ತೇನೆ ಹಾಗೂ ದುಡಿದುಕೊಂಡು ತಿನ್ನುತ್ತೇನೆ ಎಂದರೆ ಸರಿ . ನನ್ನ ಹಾಗೂ 1ನೇ ಪ್ರತಿವಾದಿಯ ಮದ್ಯ ಯಾವತ್ತು ಸಹ ಸಂಸಾರ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ 1ನೇ ಪ್ರತಿವಾದಿಗೆ ಯಾವುದೇ ಮಕ್ಕಳು ಆಗಿರುವುದಿಲ್ಲ ಎಂದರೆ ಸರಿ . 1ನೇ ಪ್ರತಿವಾದಿಯು ನನ್ನನ್ನು ಸಾಕಷ್ಟು ಬಾರಿ ಸಂಸಾರ ಮಾಡಲು ಕರೆದರು ಸಹ ನಾನು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಪ್ಪಿ ನಿಂದ ನಾನು ನನ್ನ ತವರು ಮನೆಯಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ. ನಾನು 1ನೇ ಪ್ರತಿವಾದಿಯ ಜೊತೆ ಕಾನೂನು ಬದ್ದವಾಗಿ ಮದುವೆ ಆಗಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 1ನೇ ಪ್ರತಿವಾದಿ ನನಗೆ ಯಾವುದೇ ರೀತಿಯಿಂದ ಜೀವನಾಂಶ ಕೊಡಲು ಅರ್ಹನಲ್ಲ ಎಂದರೆ ಸರಿಯಲ್ಲ.

4. 1ನೇ ಪ್ರತಿವಾದಿ ಅನಾರೋಗ್ಯದಿಂದ ಇರುವುದರಿಂದ ಅವನು ನನಗೆ ಜೀವನಾಂಶ ನೀಡಲು ಆಗುವುದಿಲ್ಲ ನಾನು ಆರೋಗ್ಯವಾಗಿ ಇರುವುದರಿಂದ ನನ್ನ ಜೀವನವನ್ನು ನಾನು ನೋಡಿಕೊಳ್ಳಬಲ್ಲೆ

ಎಂದರೆ ಸರಿಯಲ್ಲ. ನಾನು ಸುಳ್ಳು ಅಪವಾದ ಹೊರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.